ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ಬದಾಮಿ ಇವರ ನ್ಯಾಯಾಲಯದಲ್ಲಿ
ಬದಾಮಿ

ಸಿ.ಸಿ. ನಂ.994/2022

1. ಕರ್ನಾಟಕ ಸರ್ಕಾರದ ಪರವಾಗಿ ಬದಾಮಿ ಪೋಲಿಸ ಠಾಣೆ

.......ಫಿರ್ಯಾದಿದಾರರು

// ವಿರುದ್ಧ //

1. ಶ್ರೀ ವಸಂತ ತಂ.ಅಮರಪ್ಪ ಜಕ್ಕಮ್ಮನವರ

........ಆರೋಪಿತ

ನಾನು ಶ್ರೀ ಸಂಜುಕುಮಾರ ಪಾಶ್ಚಾಪುರ ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಬದಾಮಿ ಆದ ನಾನು ನಿಮ್ಮ ಮೇಲೆ ಅಂದರೆ,

1. ಶ್ರೀ ವಸಂತ ತಂ.ಅಮರಪ್ಪ ಜಕ್ಕಮ್ಮನವರ
ವಯಸ್ಸುಃ 302 ವರ್ಷ
ಸಾಃ ಕುಟಕನಕೇರಿ, ತಾಃ ಬಾದಾಮಿ, ಜಿಃ ಬಾಗಲಕೋಟೆ.

ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಮಾಡುವುದೇನೆಂದರೆ,

:: ದೋಷಾರೋಪಣೆ ::

ದಿನಾಂಕಃ 03.12.2021 ರಂದು ಬೆಳಿಗ್ಗೆ 15-30 ಗಂಟೆಯ ಸುಮಾರಿಗೆ ಬಾದಾಮಿ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಚೋಳಚಗುಡ್ಡ ಗ್ರಾಮದಲ್ಲಿ ರಸ್ತೆ ಮೇಲೆ ಆರೋಪಿಯಾದ ನೀವು ಸರ್ಕಾರದಿಂದ ವಿವಿಧ ಯೋಜನೆಗಳ ಅಡಿಯಲ್ಲಿ ಫಲಾನುಭವಿಗಳಿಗೆ ಉಚಿತವಾಗಿ ಹಂಚಿಕೆ ಮಾಡುವ 180 ಕೆ.ಜಿ. ಅಕ್ಕಿ (30 ಕೆ.ಜಿ. 6 ಚಂಡುಗಟ್ಟಿದ ಪ್ಲಾಸ್ಟಿಕ ಚೀಲಗಳು) ಒಟ್ಟು ಕಿಮ್ಮತ್ತು ರೂ.3780/- ಅಕ್ಕಿಯನ್ನು ಜನರಿಂದ ಖ್ಯಾಡ, ಹೋಳೆಆಲೂರ, ಕಾತರಕಿ ಹಾಗೂ ಇತರೆ ಗ್ರಾಮಗಳಲ್ಲಿ ಖರೀದಿಸಿಕೊಂಡು ಅದನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಸಲುವಾಗಿ ಈ ಕೇಸಿನಲ್ಲಿ ಜಪ್ತಾದ ಅಟೋ ನಂ. ಕೆಎ-29/ಬಿ-0464 ನೇದ್ದರಲ್ಲಿ ಸಾಗಾಟ ಮಾಡುವಾಗ ಚೋಳಚಗುಡ್ಡ ಗ್ರಾಮದ ಸರ್ಕಾರಿ ಶಾಲೆಯ ಹತ್ತಿರ ರಸ್ತೆ ಮೇಲೆ ಇದರಲ್ಲಿಯ ಪಿರ್ಯಾದಿ ಹಾಗೂ ಚಾಸಾ-4 ಮತ್ತು 5 ನೇದವರು ಅಟೋ ಸಾಗಾಟ ಮಾಡ್ತಾ ಇದ್ದಿರಿ ನಿಮಗೆ ಅಟೋ ನಿಲ್ಲಿಸಲು ಕೈ ಮಾಡಿದಾಗ ನೀವು ಅಟೋವನ್ನು ಸ್ಥಳದಲ್ಲಿ ನಿಲ್ಲಿಸಿ ಓಡಿ ಹೋಗಿರುತ್ತೀರಿ. ಆ ಮೂಲಕ ನೀವುಗಳು ಅವಶ್ಯಕ ವಸ್ತುಗಳ ಕಾಯ್ದೆ 1955 ರ ಕಲಂಃ 7 ಮತ್ತು 3 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಪ್ರ.1 : ನಿಮಗೆ ಓದಿ ಹೇಳಿದ ದೋಷಾರೋಪಣೆ ಅರ್ಥವಾಯಿತೇ?
ಉತ್ತರ : ತಿಳಿಯಿತು.

ಪ್ರ.2 : ಸದರಿ ದೋಷರೋಪಣೆಯನ್ನು ಒಪ್ಪಿಕೊಳ್ಳುವಿಯೋ ? ಅಥವಾ ವಿಚಾರಣೆಯಾಗಬೇಕೋ?
ಉತ್ತರ : ಸುಳ್ಳು, ವಿಚಾರಣೆಯಾಗಬೆಕು.

(ಆರೋಪಿತನಿಗೆ ದೋಷಾರೋಪಣೆಯ ಸಾರಾಂಶವನ್ನು ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಇಂದು ನಮ್ಮ ಸಮಕ್ಷಮ ಓದಿ ಹೇಳಿ ವ ಕೇಳಿ ಅವರು ಕೊಟ್ಟ ಉತ್ತರಗಳನ್ನು ನಮೂದಿಸಿಕೊಳ್ಳಲಾಗಿದೆ .)

ಸ್ಥಳಃ ಬಾದಾಮಿ
ದಿನಾಂಕಃ 06-06-2024
ವ ನಿಂತ

6/6

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ,ಬದಾಮಿ